**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಬುಡ್ನ ಸಿದ್ದಿ ಇವರ ನಿಯಮ 72 ರ ಮೇರೆಗೆ ಗಮನ ಸೆಳೆಯುವ ಸೂಚನೆಗೆ ಉತ್ತರ**

59

**ಪ್ರಶ್ನೆ:**

ವಸತಿ ಇಲಾಖೆಯಲ್ಲಿ ಒಂದು ಸಲ ಮನೆ ಮಂಜೂರು ಆದವರಿಗೆ ಮತ್ತೆ ಮನೆ ಮಂಜೂರಿ ಆಗುವುದು 15 ವರ್ಷಗಳ ನಂತರ ಆದರೆ ಅನೇಕ ಮನೆಗಳು ನಿರಂತರ ಸುರಿಯುವ ಮಳೆ, ಪ್ರವಾಹ ಮುಂತಾದ ಕಾರಣ ಕೆಲವೇ ವರ್ಷಗಳಲ್ಲಿ ದುರಸ್ಥಿಗೆ ಬರುತ್ತವೆ. ಆದರೆ ಗ್ರಾಮೀಣ ಭಾಗದಲ್ಲಿನ ಬಡ ಮತ್ತು ಅನೇಕ ಜಿಲ್ಲೆಗಳಲ್ಲಿನ ಬಡ ಬುಡಕಟ್ಟು ಕುಟುಂಬಗಳಿಗೆ ಇಂತಹ ಮನೆಗಳ ದುರಸ್ಥಿ ಕಾರ್ಯ ಕೈಗೊಳ್ಳಲು ಸಹ ಆರ್ಥಿಕ ಶಕ್ತಿ ಇಲ್ಲದೆ ಇಂತಹ ಮನೆಗಳಲ್ಲಿ ಭಯದ ವಾತಾವರಣದಲ್ಲಿ ಬದುಕುವ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ದುರಸ್ಥಿ ಮನೆಗಳ ರಿಪೇರಿಗೂ ಸಹ ಸರ್ಕಾರ ಅನುದಾನ ನೀಡುವಂತಾಗಬೇಕು.

**ಉತ್ತರ :**

ಸರ್ಕಾರವು ಹೊರಡಿಸಿರುವ ಮನೆ ಮಾರ್ಗಸೂಚಿಯಲ್ಲಿ ವಸತಿ ಯೋಜನೆಯಡಿ ಈಗಾಗಲೇ ವಸತಿ ಸೌಲಭ್ಯ ಪಡೆದಿರುವ ಕುಟುಂಬವು ಸರ್ಕಾರದ ಅನುದಾನ ಪಡೆದು ನಿರ್ಮಾಣ ಮಾಡಿಕೊಂಡ ಮನೆಯು ಯಾವುದೇ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಸಂಪೂರ್ಣವಾಗಿ ಬಿದ್ದುಹೋದಲ್ಲಿ/ಶಿಥಿಲಗೊಂಡಲ್ಲಿ ಸಂಬಂಧಪಟ್ಟ ಇಲಾಖೆಯಿಂದ ದೃಢೀಕರಣವನ್ನು ಪಡೆದು ಹಾಗೂ ಸದರಿ ಕುಟುಂಬವು ಮನೆ ನಿರ್ಮಾಣಕ್ಕಾಗಿ ನಗದು ಪರಿಹಾರವನ್ನು ಪಡೆದಿಲ್ಲದಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ದೃಢೀಕರಣವನ್ನು ಪಡೆದು ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳನ್ನಾಗಿ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರದ ಈ ಕೆಳಕಂಡ ಆದೇಶ/ಮಾರ್ಗಸೂಚಿ/ಪತ್ರಗಳನ್ವಯ ಮಳೆ/ಅತಿವಷ್ಟಿಯಿಂದ ಹಾನಿಗೊಳಗಾದ ಮನೆಗಳನ್ನು ವಿವಿಧ ವಸತಿ ಯೋಜನೆ/ನೆರೆಸಂತ್ರಸ್ಥರ ಪುನರ್ವಸತಿ ಯೋಜನೆಗಳಡಿ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

| ಕ್ರ.ಸಂ. | ಆದೇಶ/ಮಾರ್ಗಸೂಚಿ/ಪತ್ರ ಸಂಖ್ಯೆ | ಆದೇಶ/ನಿರ್ದೇಶನದ ಮಾಹಿತಿ |
|---|---|---|
| 01 | ಕಂಇ 433 ಟಿಎನ್ಆರ್ 2021, ದಿನಾಂಕ: 13.10.2021 | ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಾಣ ಕೆಲಸ ಪೂರ್ಣಗೊಂಡು ನಿಯಮಾನುಸಾರ ಸಾರ್ವಜನಿಕರಿಗೆ ಮನೆ ಹಂಚಿಕೆಯಾಗಿ ಸದರಿ ಮನೆಯಲ್ಲಿ ಫಲಾನುಭವಿ ವಾಸವಿದ್ದು, ಅಂತಹ ಮನೆಗಳು ಮಳೆ/ಅತಿವೃಷ್ಟಿಯಿಂದ ಹಾನಿಗೊಳಗಾಗಿದ್ದಲ್ಲಿ ನೆರೆಸಂತ್ರಸ್ಥರ ಪುನರ್ವಸತಿ ಯೋಜನೆಯ ಎ, ಬಿ ಮತ್ತು ಸಿ ವರ್ಗದಡಿ ಪರಿಹಾರ ಪಾವತಿಸುವುದು. |
| 02 | ಆರ್‌ಡಿ 439 ಟಿಎನ್ ಆರ್ 2022, ದಿನಾಂಕ: 20.10.2022 | |
| 03 | ವಇ 258 ಹೆಚ್ಎಎಂ 2022, ದಿನಾಂಕ: 18.10.2022 | 2019-20 ರಿಂದ 2021-22ನೇ ಸಾಲಿನ ಮಳೆ/ಅತಿವೃಷ್ಟಿಯಿಂದ ಅಲ್ಪಸ್ವಲ್ಪ ಹಾನಿಗೊಳಗಾದ ಮನೆಗಳನ್ನು ವಿವಿಧ ವಸತಿ ಯೋಜನೆಗಳಡಿ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. |

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ 258 ಟಿಎನ್ಆರ್ 2024, ದಿನಾಂಕ: 01.08.2024 ಮತ್ತು ಪರಿಷ್ಕೃತ ಸೇರ್ಪಡೆ ಆದೇಶ ದಿನಾಂಕ: 08.08.2024 ಹಾಗೂ ಕಂಇ 206 ಟಿಎನ್ಆರ್ 2025, ದಿನಾಂಕ: 29.05.2025ರನ್ವಯ 2024-25 ಹಾಗೂ 2025-26ನೇ ಸಾಲುಗಳ ಮಳೆ/ಅತಿವೃಷ್ಟಿಯಿಂದ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣ/ದುರಸ್ಥಿಗೆ ಈ ಕೆಳಕಂಡಂತೆ ಪರಿಹಾರಧನ ಬಿ ಡುಗಡೆ ನೀಡಲಾಗುತ್ತಿದೆ.

| ಹಾನಿ ಪ್ರಮಾಣ/ವರ್ಗ | ನಿಗದಿಯಾಗಿರುವ ಪರಿಹಾರ ಮೊತ್ತ |
|---|---|
| ಸಂಪೂರ್ಣ ಮನೆ ಹಾನಿ | **NDRF/SDRF:** ರೂ.1.20ಲಕ್ಷ<br><br>**ರಾಜ್ಯ ಸರ್ಕಾರ (ದೇವರಾಜು ಅರಸು ವಸತಿ ಯೋಜನೆ):**<br>ರೂ.1.20ಲಕ್ಷ (Gen)<br>ರೂ.1.50ಲಕ್ಷ (SC/ST)<br>**ಒಟ್ಟಾರೆ**<br>ರೂ.2.40ಲಕ್ಷ (Gen)<br>ರೂ.2.70ಲಕ್ಷ (SC/ST) |
| ಅತೀ ಸಣ್ಣ ಪ್ರಮಾಣದ ಮನೆ ಹಾನಿ (15% ರಿಂದ 20%) | ರೂ.6,500/- |
| ಮಧ್ಯಮ ಪ್ರಮಾಣದ ಮನೆ ಹಾನಿ (20% ರಿಂದ 50%) | ರೂ.30,000/- |
| ಹೆಚ್ಚು ಪ್ರಮಾಣದ ಮನೆ ಹಾನಿ (50% ರಿಂದ 75%) | ರೂ.50,000/- |
| ಅನಧಿಕೃತ ಮನೆಗಳು **(ಇರುವ ಜಾಗದಲ್ಲಿಯೇ ನಿರ್ಮಿಸಿಕೊಳ್ಳುವ ಮನೆಗಳು)** | ರೂ.1.00ಲಕ್ಷ |

ಸಂಖ್ಯೆ: ವಇ 473 ಹೆಚ್‌ಎಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು